ಕಾಲೇಜು ಶಿಕ್ಷಣ ಇಲಾಖೆ

# ಮಹಾರಾಣಿ ಮಹಿಳಾ ಕಲಾ ಕಾಲೇಜು


ಸ್ನಾತಕ ಮತ್ತು ಸ್ನಾತಕೋತ್ತರ ಕೇಂದ್ರ

ಜೆ.ಎಲ್.ಬಿ. ರಸ್ತೆ ಮೈಸೂರು – 570 005

ನ್ಯಾಕ್‌ನಿಂದ 'ಬಿ' ಮಾನ್ಯತೆ ಪಡೆದಿದೆ

ದೂರವಾಣಿ : 0821–2425635 ಫ್ಯಾಕ್ಸ್ : 0821–2425636

Email : info@macwmys.org. principal@macwmys.org.

web: www.macwmys.org


## ಪರಿಚಯ ಪುಸ್ತಕ

## PROSPECTUS

## 2015-16



# ಪರಿಚಯ ಪುಸ್ತಕ : 2015-16

## ಮಹಾರಾಣಿ ಮಹಿಳಾ ಕಲಾ ಕಾಲೇಜು


**ಸ್ನಾತಕ ಹಾಗೂ ಸ್ನಾತಕೋತ್ತರ ಕೇಂದ್ರ, ಮೈಸೂರು - 570 005**

Email : info@macwmys.org. principal@macwmys.org.

ದೂರವಾಣಿ : 0821-2425635 Fax : 0821-2425636 Web Address : www.macwmys.org


### ಪ್ರವೇಶಾತಿ ಸಮಿತಿ 2015-16

| ಪ್ರಾಂಶುಪಾಲರು : | ಸಂಚಾಲಕರು : |
|---|---|
| ಪ್ರೊ. ಎಂ. ಪುರುಷೋತ್ತಮ್ | ಪ್ರೊ. ನೇತ್ರಾವತಿ ಎಂ. |

**ಸದಸ್ಯರು**

| | | |
|---|---|---|
| ಡಾ. ದಶರಥ್ ಆರ್. | ಪ್ರೊ. ನಾಗರಾಜು ಎನ್. | ಪ್ರೊ. ಗ್ರೇಸಿ ವಾಸಂತಿ ಡಿ. |
| ಪ್ರೊ. ಸುಂದರ್ | ಪ್ರೊ. ರಾಜಶೇಖರನ್ | ಡಾ. ಕಲಾಶ್ರೀ ಹೆಚ್.ಎಂ. |
| ಪ್ರೊ. ಲೀಲಮ್ಮ ಜೆ. | ಪ್ರೊ. ವಸಂತಾದೇವಿ ಹೆಚ್.ಕೆ. | ಪ್ರೊ. ಶೈಲಜಾ ಬಿ.ಎಸ್. |
| ಡಾ. ಜಯರಾಜು ಆರ್. | ಡಾ. ವಸುಮ ಎಂ.ಜಿ. | ಡಾ. ಎನ್.ಟಿ. ಕೃಷ್ಣಮೂರ್ತಿ |
| ಪ್ರೊ. ಜಗದೀಶ್ ಟಿ.ಎಲ್. | ಪ್ರೊ. ಸುಮ ಎ. | ಪ್ರೊ. ಕಲಾವತಿ |
| ಪ್ರೊ. ಮನೋನ್ಮಣಿ | | |

### ನಮ್ಮ ದೃಷ್ಟಿ

ಶೈಕ್ಷಣಿಕ ಘನತೆಯಿಂದ ಕೂಡಿದ ಬೋಧನೆ ಹಾಗೂ ಸಂಶೋಧನೆಗಳ ಉನ್ನತ ಸಾಧನೆಯ ಮೂಲಕ ಸಾಮಾಜಿಕ ನ್ಯಾಯದೊಂದಿಗೆ ಸಮಾಜದ ನಿರೀಕ್ಷೆಯಂತೆ ಮಹಿಳೆಯರನ್ನು ಸರ್ವರೀತಿಯಿಂದಲೂ ಸಲಬಗೊಳಿಸುವುದು. ಆ ಮೂಲಕ ದೇಶದಲ್ಲಿ ಮಹಿಳೆಯರನ್ನು ಸಬಲಗೊಳಿಸಿದ ಅತ್ಯುನ್ನತ ಕಾಲೇಜು ಎಂಬ ಹೆಗ್ಗಳಿಕೆಗೆ ಪಾತ್ರವಾಗುವುದು.

### ನಮ್ಮ ಸೃಷ್ಟಿ

- ಇಂದು ಉದ್ಭವಿಸುತ್ತಿರುವ ಸಮಾಜದ ಅಗತ್ಯಗಳನ್ನು ಪೂರೈಸುವಂಥ ಉನ್ನತ ಶಿಕ್ಷಣದ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುವುದು.
- ವಿದ್ಯಾರ್ಥಿನಿಯರ ಸಾಧನೆ ಹಾಗೂ ಯಶಸ್ಸನ್ನು ಹುರಿದುಂಬಿಸುವ ಮೂಲಕ ಅವರನ್ನು ಜೀವನ ಹಾಗೂ ನಾಯಕತ್ವಕ್ಕೆ ಸಜ್ಜುಗೊಳಿಸುವುದು.
- ವಿದ್ಯಾರ್ಥಿನಿಯರ ಹಾಗೂ ಅಧ್ಯಾಪಕರ ವೈಯಕ್ತಿಕ ಬೆಳವಣಿಗೆ ಹಾಗೂ ವೃತ್ತಿಪರತೆಯನ್ನು ಹೆಚ್ಚಿಸುವಂಥ ಸಂವೇದನಾಶೀಲವಾದ ಕಲಿಕೆ ಹಾಗೂ ವಿಶೇಷ ತಜ್ಞತೆಯ ವಾತಾವರಣವನ್ನು ಕಲ್ಪಿಸುವುದು.
- ಅತ್ಯಾಧುನಿಕ ಜ್ಞಾನಸ್ಫೋಟದಲ್ಲಿ ಭಾಗಿಯಾಗುವುದು.
- ನೌಕರರು, ಹಿರಿಯರು ಹಾಗೂ ಸಮಾಜದೊಂದಿಗೆ ಉಪಯುಕ್ತವಾದ ಸಂಬಂಧವನ್ನು ಹೊಂದುವುದು.
- ವಿದ್ಯಾರ್ಥಿನಿಯರಲ್ಲಿ ನೈತಿಕ ಮೌಲ್ಯಗಳನ್ನು ರೂಢಿಸುವುದು.
- ಆಧ್ಯಾತ್ಮಿಕ ಮೌಲ್ಯಗಳ ಮುಖಾಂತರ ವಿದ್ಯಾರ್ಥಿನಿಯರ ಆಂತರಿಕ ಸಾಮರ್ಥ್ಯವನ್ನು ಪ್ರಬಲೀಕರಣಗೊಳಿಸುವುದು.



'ಶಿಕ್ಷಣವೆಂದರೆ ಮನುಷ್ಯನ ದೇಹ, ಮನಸ್ಸು ಮತ್ತು ಆತ್ಮಗಳ ಉತ್ತಮ ಶಕ್ತಿಗಳನ್ನೆಲ್ಲಾ ಸರ್ವತೋಮುಖವಾಗಿ ವಿಕಸನಗೊಳಿಸುವುದು' - ಎಂಬುದು ಶಿಕ್ಷಣವನ್ನು ಕುರಿತ ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಅಭಿಪ್ರಾಯ. ಇಂಥ 'ವಿಕಸನ' ಕೇವಲ ಪುರುಷ ಸಮುದಾಯದಲ್ಲಾದರೆ ಪೂರ್ಣ ಪ್ರಯೋಜನವಿಲ್ಲ. ತಾಯಿ ಸ್ಥಾನದಲ್ಲಿ ಗಂಡಿಗೂ ಗುರುವಾಗುವ ಹೆಣ್ಣು ಉನ್ನತ ಶಿಕ್ಷಣ ಪಡೆದಾಗಲೇ ದೇಶದ, ಜಗತ್ತಿನ ಸರ್ವತೋಮುಖ ವಿಕಸನ, ಪ್ರಕಾಶನ ಸಾಧ್ಯವಾಗುವುದು.

ಇಂಥ ಹೆಗ್ಗುರಿಯ ಸಾಧನೆಯತ್ತ ಮಹತ್ವದ ಹೆಜ್ಜೆಗಳನ್ನಿರಿಸಿ ಮುನ್ನಡೆಯುತ್ತಿರುವ ಮಹಾರಾಣಿ ಕಾಲೇಜು ಇಲ್ಲಿ ಕಲಿಯಲು ಬಂದ ಎಲ್ಲರನ್ನೂ ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಸದೃಢರನ್ನಾಗಿಸುವ ಧೋರಣೆಯಡಿಯಲ್ಲಿ ಕ್ರಿಯಾಶೀಲವಾಗಿದೆ. ಅರಮನೆಯಿಂದ ಗುರುಮನೆಗೆ, ಗುರುಮನೆಯಿಂದ ಸರ್ವರ ಮನ-ಮನೆಗೆ ಜ್ಞಾನವಾಹಿನಿ ಹರಿದುಬಂದುದರ ದ್ಯೋತಕವಾಗಿರುವ ಈ ಕಾಲೇಜಿನಲ್ಲಿ ಅಧ್ಯಯನ ನಡೆಸಿದ ಅನೇಕರು ರಾಜ್ಯ, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ್ದಾರೆ. ರಾಜ್ಯ ಸರ್ಕಾರದ ಮಹಿಳಾ ಶಿಕ್ಷಣ ಪರವಾದ ಎಲ್ಲಾ ಯೋಜನೆಗಳನ್ನು ಸಾಕಾರಗೊಳಿಸಿ ಅವುಗಳ ಸದುಪಯೋಗ ವಿದ್ಯಾರ್ಥಿನಿಯರಿಗೆ ಸಲ್ಲುವಂತೆ ಮಾಡುವಲ್ಲಿ ಈ ಕಾಲೇಜು ಸಾಫಲ್ಯ ಕಂಡಿದೆ. ಇಲ್ಲಿನ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಘನತೆಯನ್ನು ಕೂಲಂಕುಷ ಪರಿಶೀಲಿಸಿದ 'ನ್ಯಾಕ್' ಸಂಸ್ಥೆ ನಮ್ಮ ಕಾಲೇಜಿಗೆ 'ಬಿ-ಗ್ರೇಡ್' ಮಾನ್ಯತೆಯನ್ನು ನೀಡಿದೆ. ಅತ್ಯುನ್ನತ ಶ್ರೇಣಿಯನ್ನು ಪಡೆಯಲು ಕಾಲೇಜು ಮುಂದಾಗಿದೆ. 2014-15 ನೇ ಸಾಲಿನ ಪುನರ್ ಮೌಲೀಕರಣಕ್ಕಾಗಿ (ಮೂರನೆಯ ಆವೃತ್ತಿ) ಆಡಳಿತಾತ್ಮಕ ಹಾಗೂ ಶೈಕ್ಷಣಿಕವಾಗಿ ಕಾಲೇಜು ಸಜ್ಜಾಗಿದೆ.

ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನೆಗಳಲ್ಲಿ ತಮ್ಮನ್ನು ಗಂಭೀರವಾಗಿ ತೊಡಗಿಸಿಕೊಂಡಿರುವ ಅನುಭವ ಅಧ್ಯಾಪಕ ವೃಂದ ಇಲ್ಲಿದೆ. ವಿದ್ಯಾರ್ಥಿನಿಯರನ್ನು ಪಠ್ಯನಿಷ್ಠ ಶಿಕ್ಷಣದ ಜೊತೆ ಜೊತೆಯಲ್ಲಿಯೆ ಇನ್ನಿತರ ಹಲವು ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುವ, ಕಾರ್ಯೋನ್ಮುಖರನ್ನಾಗಿಸುವ ಹಲವು ಚಟುವಟಿಕೆಗಳು ಇಲ್ಲಿವೆ.

ಒಟ್ಟು ರಾಜ್ಯದ ಸಂದರ್ಭದಲ್ಲಿಯೇ ವಿಶಿಷ್ಟ ಪಾರಂಪರಿಕ ಹಿರಿಮೆ ಮತ್ತು ಶೈಕ್ಷಣಿಕ ಘನತೆಯನ್ನು ಹೊಂದಿರುವ ನಮ್ಮೆಲ್ಲರ ಈ ಕಾಲೇಜಿಗೆ ಶಿಕ್ಷಣಾರ್ಥಿಗಳಾಗಿ ಬರಲು ಹಂಬಲಿಸುತ್ತಿರುವ ವಿದ್ಯಾರ್ಥಿನಿಯರನ್ನು ಪೂರ್ವಭಾವಿಯಾಗಿ ಸ್ವಾಗತಿಸುತ್ತೇನೆ. ಈ ಪರಿಚಯ ಪುಸ್ತಕದಲ್ಲಿ ತಿಳಿಸಲಾಗಿರುವ ಎಲ್ಲಾ ಮಾಹಿತಿಗಳನ್ನು ಅಮೂಲಾಗ್ರವಾಗಿ ಓದಿ, ಮನನ ಮಾಡಿಕೊಂಡು ಈ ಕಾಲೇಜಿನ ಅರ್ಹ ವಿದ್ಯಾರ್ಥಿನಿಯರಾಗಿ ಉನ್ನತ ಶ್ರೇಣಿಯ ಸಾಧಕರಾಗಿ ಎಂದು ಮನಸಾ ಹಾರೈಸುತ್ತೇನೆ.

(ಪ್ರೊ. ಎಂ. ಪುರುಷೋತ್ತಮ್)
ಪ್ರಾಂಶುಪಾಲರು, ಗ್ರೇಡ್-1

## ಬಿ.ಎ. ಪದವಿ : ಐಚ್ಛಿಕ ವಿಷಯಗಳು

| | | | | | |
|---|---|---|---|---|---|
| 1. | ಇತಿಹಾಸ | ಅರ್ಥಶಾಸ್ತ್ರ | ರಾಜ್ಯಶಾಸ್ತ್ರ | H.E.P. | (ಕನ್ನಡ ಮತ್ತು ಆಂಗ್ಲ ಮಾಧ್ಯಮ) |
| 2. | ಇತಿಹಾಸ | ಅರ್ಥಶಾಸ್ತ್ರ | ಸಮಾಜಶಾಸ್ತ್ರ | H.E.S. | (ಕನ್ನಡ ಮತ್ತು ಆಂಗ್ಲ ಮಾಧ್ಯಮ) |
| 3. | ಇತಿಹಾಸ | ಅರ್ಥಶಾಸ್ತ್ರ | ಭೂಗೋಳಶಾಸ್ತ್ರ | H.E.G. | (ಕನ್ನಡ ಮತ್ತು ಆಂಗ್ಲ ಮಾಧ್ಯಮ) |
| 4. | ಇತಿಹಾಸ | ಅರ್ಥಶಾಸ್ತ್ರ | ಕನ್ನಡ | H.E.K. | (ಕನ್ನಡ ಮಾಧ್ಯಮ) |
| 5. | ಇತಿಹಾಸ | ಸಮಾಜಶಾಸ್ತ್ರ | ಕನ್ನಡ | H.S.K. | (ಕನ್ನಡ ಮಾಧ್ಯಮ) |
| 6. | ಇತಿಹಾಸ | ಭೂಗೋಳಶಾಸ್ತ್ರ | ಕನ್ನಡ | H.G.K. | (ಕನ್ನಡ ಮಾಧ್ಯಮ) |
| 7. | ಇತಿಹಾಸ | ಅರ್ಥಶಾಸ್ತ್ರ | ಮನಃಶಾಸ್ತ್ರ | H.E.Psy. | (ಕನ್ನಡ ಮತ್ತು ಆಂಗ್ಲ ಮಾಧ್ಯಮ) |
| 8. | ಇತಿಹಾಸ | ಅರ್ಥಶಾಸ್ತ್ರ | ತತ್ವಶಾಸ್ತ್ರ | H.E.Phil | (ಕನ್ನಡ ಮಾಧ್ಯಮ) |
| 9. | ಇತಿಹಾಸ | ಅರ್ಥಶಾಸ್ತ್ರ | ಸಂಗೀತ | H.E.M. | (ಕನ್ನಡ ಮತ್ತು ಆಂಗ್ಲ ಮಾಧ್ಯಮ) |
| 10. | ಇತಿಹಾಸ | ಅರ್ಥಶಾಸ್ತ್ರ | ಹಿಂದಿ | H.E.H. | (ಕನ್ನಡ ಮತ್ತು ಆಂಗ್ಲ ಮಾಧ್ಯಮ) |
| 11. | ಇತಿಹಾಸ | ಭೂಗೋಳಶಾಸ್ತ್ರ | ರಾಜ್ಯಶಾಸ್ತ್ರ | H.G.P. | (ಕನ್ನಡ ಮಾಧ್ಯಮ) |
| 12. | ಕನ್ನಡ | ಸಮಾಜಶಾಸ್ತ್ರ | ಮಹಿಳಾ ಅಧ್ಯಯನ | K.S.W.S. | (ಕನ್ನಡ ಮಾಧ್ಯಮ) |
| 13. | ಇತಿಹಾಸ | ಅರ್ಥಶಾಸ್ತ್ರ | ಸಾರ್ವಜನಿಕ ಆಡಳಿತ | H.E.P. | (ಕನ್ನಡ ಮಾಧ್ಯಮ) |
| 14. | ಇತಿಹಾಸ | ಸಮಾಜಶಾಸ್ತ್ರ | ಮನಃಶಾಸ್ತ್ರ | H.S.Psy. | (ಕನ್ನಡ ಮಾಧ್ಯಮ) |
| 15. | ಮನಃಶಾಸ್ತ್ರ | ಸಮಾಜಶಾಸ್ತ್ರ | ಭೂಗೋಳಶಾಸ್ತ್ರ | Psy.S.G. | (ಕನ್ನಡ ಮತ್ತು ಆಂಗ್ಲ ಮಾಧ್ಯಮ) |
| 16. | ಇತಿಹಾಸ | ಅರ್ಥಶಾಸ್ತ್ರ | ಇಂಗ್ಲೀಷ್ | H.E.E. | (ಆಂಗ್ಲ ಮಾಧ್ಯಮ) |
| 17. | ಇತಿಹಾಸ | ಅರ್ಥಶಾಸ್ತ್ರ | ಉರ್ದು | H.E.U. | (ಆಂಗ್ಲ ಮತ್ತು ಕನ್ನಡ ಮಾಧ್ಯಮ) |
| 18. | ಮನಃಶಾಸ್ತ್ರ | ಸಮಾಜಶಾಸ್ತ್ರ | ಇಂಗ್ಲೀಷ್ | Psy.S.E. | (ಆಂಗ್ಲ ಮಾಧ್ಯಮ) |
| 19. | ಇತಿಹಾಸ | ಅರ್ಥಶಾಸ್ತ್ರ | ಪತ್ರಿಕೋದ್ಯಮ | H.E.J. | (ಆಂಗ್ಲ ಮಾಧ್ಯಮ) |
| 20. | ಇತಿಹಾಸ | ಕನ್ನಡ | ಮನಃಶಾಸ್ತ್ರ | H.K.Psy. | (ಕನ್ನಡ ಮಾಧ್ಯಮ) |
| 21. | ಅರ್ಥಶಾಸ್ತ್ರ | ರಾಜ್ಯಶಾಸ್ತ್ರ | ಸಮಾಜಶಾಸ್ತ್ರ | EPS | (ಕನ್ನಡ ಮಾಧ್ಯಮ) |
| 22. | ರಾಜ್ಯಶಾಸ್ತ್ರ | ಸಮಾಜಶಾಸ್ತ್ರ | ಕನ್ನಡ | PSK | (ಕನ್ನಡ ಮಾಧ್ಯಮ) |

## ವಿಶೇಷ ಸೂಚನೆಗಳು

1. ಐಚ್ಛಿಕ ಸಮೂಹವೊಂದಕ್ಕೆ ಕನಿಷ್ಠ ಪ್ರವೇಶ 15. ಐಚ್ಛಿಕ ಸಮೂಹಗಳಲ್ಲಿ ವಿದ್ಯಾರ್ಥಿನಿಯರ ಪ್ರವೇಶಾತಿ 15ಕ್ಕಿಂತ ಕಡಿಮೆಯಾದಲ್ಲಿ ಅಂತಹ ವಿದ್ಯಾರ್ಥಿನಿಯರನ್ನು ಲಭ್ಯವಿರುವ ಅನ್ಯ ಐಚ್ಛಿಕ ಸಮೂಹಕ್ಕೆ ಕಡ್ಡಾಯವಾಗಿ ವರ್ಗಾವಣೆ ಮಾಡಲಾಗುವುದು.
2. ಪದವಿ ವಿದ್ಯಾರ್ಥಿಗಳಿಗೆ ಭಾರತ ಸಂವಿಧಾನ, ಪರಿಸರ ಅಧ್ಯಯನ, ಕಂಪ್ಯೂಟರ್ ಅಪ್ಲಿಕೇಷನ್ಸ್ ವಿಷಯಗಳು ಕಡ್ಡಾಯವಾಗಿರುತ್ತವೆ. ಶ್ರೇಣಿ ನಿಗದಿಪಡಿಸಲು ಈ ವಿಷಯಗಳಲ್ಲಿ ಗಳಿಸಿದ ಅಂಕಗಳನ್ನು ಪರಿಗಣಿಸಲಾಗುವುದು.
3. ಐಚ್ಛಿಕ ವಿಷಯ ಸಮೂಹವನ್ನು (Combination) ಆಯ್ಕೆ ಮಾಡಿಕೊಳ್ಳುವಾಗ ವಿದ್ಯಾರ್ಥಿನಿಯರು ಯಾವುದೇ ಒತ್ತಾಯಕ್ಕೆ ಒಳಗಾಗದೆ ಸ್ವಂತ ಆಸಕ್ತಿಯಿಂದ ನಿರ್ಧಾರವನ್ನು ತೆಗೆದುಕೊಳ್ಳತಕ್ಕದ್ದು. ಪ್ರವೇಶದ ನಂತರ ಕಾಂಬಿನೇಷನ್ ಬದಲಾವಣೆಗೆ ಮುಕ್ತ ಅವಕಾಶವಿಲ್ಲ.

## ವಿವಿಧ ವಿದ್ಯಾರ್ಥಿ ವೇತನಗಳ ಸೌಲಭ್ಯ

1. ಪ.ಜಾತಿ/ ಪ.ಪಂಗಡ ವಿದ್ಯಾರ್ಥಿಗಳಿಗೆ ಭಾರತ ಸರ್ಕಾರ / ರಾಜ್ಯ ಸರ್ಕಾರದ ವಿದ್ಯಾರ್ಥಿ ವೇತನ.
2. ಜಿಲ್ಲಾ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹಧನ.
3. ಕರ್ನಾಟಕ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು - ಇವರಿಂದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ / ಪ್ರೋತ್ಸಾಹ ಧನ / ಅರಿವು ಯೋಜನೆಯಡಿ ಶೈಕ್ಷಣಿಕ ಸಾಲ (ವೃತ್ತಿಪರ ಕೋರ್ಸ್‌ಗಳಿಗೆ)
4. ನಗರಪಾಲಿಕೆ / ಪುರಸಭೆ / ಗ್ರಾಮಪಂಚಾಯಿತಿಯಿಂದ ಶೈಕ್ಷಣಿಕ ಸಹಾಯಧನ.
5. ದ್ವಿತೀಯ ಪಿಯುಸಿಯಲ್ಲಿ ಮೆರಿಟ್ ಪಡೆದವರಿಗೆ ಮೆರಿಟ್ ವಿದ್ಯಾರ್ಥಿ ವೇತನ (MHRD)
6. ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಕಾಲೇಜು ಶಿಕ್ಷಣ ಇಲಾಖೆಯಿಂದ ಸಂಚಿಹೊನ್ನಮ್ಮ ವಿದ್ಯಾರ್ಥಿ ವೇತನ.
7. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ.
8. ಕಾರ್ಮಿಕ ಕಲ್ಯಾಣ ಮಂಡಳಿಯಿಂದ ಕರ್ನಾಟಕ ಸರ್ಕಾರದ ವಿದ್ಯಾರ್ಥಿವೇತನ / ಪ್ರೋತ್ಸಾಹಧನ.
9. ಮೈಸೂರು ವಿಶ್ವವಿದ್ಯಾನಿಲಯದಿಂದ ಕ್ರೀಡಾ ವಿದ್ಯಾರ್ಥಿವೇತನ.
10. ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕ್ಷೇಮಪಾಲನಾ ವಿಭಾಗದಿಂದ ಅಂಗವಿಕಲ ವಿದ್ಯಾರ್ಥಿಗಳಿಗೆ ಧನಸಹಾಯ.
11. ಜಿಂದಾಲ್ ಫೌಂಡೇಷನ್ ವತಿಯಿಂದ ಮೆರಿಟ್ ವಿದ್ಯಾರ್ಥಿವೇತನ.
12. ಕಾಲೇಜು ವತಿಯಿಂದ ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ.
13. ಎನ್.ಸಿ.ಸಿ. ವಿದ್ಯಾರ್ಥಿ ವೇತನ.
14. ಸೈನಿಕ ಮಕ್ಕಳ ಶಿಷ್ಯವೇತನ.
15. ರಾಜೀವ್ ಗಾಂಧಿ ಶೈಕ್ಷಣಿಕ ಸಾಲ Education Loan
16. ಜಿಲ್ಲಾಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅರಿವು ಸಾಲ ಯೋಜನೆ.
17. ಇಂದಿರಾಗಾಂಧಿ ಸಿಂಗಲ್ ಗರ್ಲ್ ಚೈಲ್ಡ್ ವಿದ್ಯಾರ್ಥಿ ವೇತನ ಯೋಜನೆ.
18. ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗ ವತಿಯಿಂದ ಪದವಿಯಲ್ಲಿ ರ್‍ಯಾಂಕ್ ಪಡೆದವರಿಗೆ ವಿದ್ಯಾರ್ಥಿವೇತನ.
19. ONGC ವಿದ್ಯಾರ್ಥಿವೇತನ ಎಸ್.ಸಿ./ಎಸ್.ಟಿ. ವಿದ್ಯಾರ್ಥಿನಿಯರಿಗೆ.
20. ಫೇರ್ ಅಂಡ್ ಲವ್ಲಿ ವಿದ್ಯಾರ್ಥಿ ವೇತನ ಹತ್ತನೇ ತರಗತಿ ಮತ್ತು ಪಿಯುಸಿಯಲ್ಲಿ 60% ಗಿಂತ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಯರಿಗೆ.

## ಸಮಗ್ರ ವಿಕಾಸಕ್ಕಾಗಿ ಹಲವು ವ್ಯವಸ್ಥೆಗಳು

**ಕಾಲೇಜು ಅಭಿವೃದ್ಧಿ ಮಂಡಳಿ** : ಕ್ಷೇತ್ರದ ಶಾಸಕರ ಅಧ್ಯಕ್ಷತೆಯಲ್ಲಿ ಕಾಲೇಜಿನ ಅಭಿವೃದ್ಧಿ ಮಂಡಳಿಯು ಅಸ್ತಿತ್ವದಲ್ಲಿದೆ. ಸದರಿ ಸಮಿತಿಯು ಕಾಲೇಜಿನ ಏಳ್ಗೆಗೆ ಅಗತ್ಯವಾದ ಸೌಕರ್ಯವನ್ನು ನೀಡುವಲ್ಲಿ ಸಹಕಾರಿಯಾಗಿದೆ.

**ಹಿರಿಯ ವಿದ್ಯಾರ್ಥಿಗಳ ಸಂಘ** : ಕಾಲೇಜಿನಲ್ಲಿ ಓದಿ ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿರಿಯ ವಿದ್ಯಾರ್ಥಿಗಳು ಕಾಲೇಜಿನ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಿರುವ ಹಿರಿಯ ವಿದ್ಯಾರ್ಥಿಗಳ ಸಂಘವಿದೆ.

**ಆಂತರಿಕ ಗುಣಮಟ್ಟ ಭರವಸಾ ಕೋಶ (IQAC)** : ಯು.ಜಿ.ಸಿ.ಯ ನಿಯಮಾನುಸಾರ ಆಂತರಿಕ ಗುಣಮಟ್ಟ ಭರವಸಾ ಕೋಶ ಸಮಿತಿಯನ್ನು ರಚಿಸಲಾಗಿದೆ. ಸಮಿತಿಯು ಕಾಲೇಜಿನ ಗುಣಮಟ್ಟವನ್ನು ಪರಿಶೀಲಿಸುತ್ತಾ, ಕಾಲೇಜಿನ ಸಮಗ್ರ ಗುಣಮಟ್ಟವನ್ನು ಕಾಪಾಡಲು ಶ್ರಮಿಸುತ್ತಿದೆ.

**ಪೋಷಕರ ಸಭೆ** : ತಮ್ಮ ಮಕ್ಕಳ ಶ್ರೇಯೋಭಿವೃದ್ಧಿ ಹಾಗೂ ಕಾಲೇಜಿನ ಪ್ರಗತಿಯಲ್ಲಿ ಪೋಷಕರ ಮಹತ್ವ ಹಾಗೂ ಪಾಲ್ಗೊಳ್ಳುವಿಕೆಯನ್ನು ಮನವರಿಕೆ ಮಾಡಿಕೊಡುವ ಹಿನ್ನೆಲೆಯಲ್ಲಿ ಪೋಷಕರ ಸಭೆಯನ್ನು ಅಗತ್ಯಾನುಸಾರ ನಡೆಸಲಾಗುವುದು. ಸಲಹೆ-ಸೂಚನೆಗಳನ್ನು ಪರಿಗಣಿಸಲಾಗುವುದು.

**ವಿದ್ಯಾರ್ಥಿನಿಲಯ** : ವಿದ್ಯಾರ್ಥಿನಿಯರ ಅಭ್ಯುದಯಕ್ಕೆ ವಿದ್ಯಾಲಯ ಅವಶ್ಯಕವಾಗಿರುವಂತೆ ವಿದ್ಯಾರ್ಥಿನಿಲಯವೂ ಪೂರಕವಾಗಿದೆ. ಮೈಸೂರು ನಗರ ಹೊರತುಪಡಿಸಿ ಹೊರ ಸ್ಥಳಗಳಿಂದ ಬಂದ ವಿದ್ಯಾರ್ಥಿನಿಯರ ಸೌಕರ್ಯಕ್ಕಾಗಿ ಒಂದು ಪ್ರತಿಷ್ಠಿತ ಸಾಮಾನ್ಯ ವರ್ಗದ ವಿದ್ಯಾರ್ಥಿ ನಿಲಯವಿದೆ. ಪ್ರಸ್ತುತ ನಿಯಮಗಳಂತೆ ಸ್ಥಳಾವಕಾಶಕ್ಕೆ ಅನುಗುಣವಾಗಿ ವಿದ್ಯಾರ್ಥಿನಿಲಯದಲ್ಲಿ ಪ್ರವೇಶಾವಕಾಶವನ್ನು ನೀಡಲಾಗುವುದು. ವಿದ್ಯಾರ್ಥಿನಿಲಯವು ಸುಸಜ್ಜಿತ ಸುಂದರ ಕಟ್ಟಡ, ಭೋಜನಶಾಲೆ, ಸಾಂಸ್ಕೃತಿಕ ಸಭಾಂಗಣ ಹೊಂದಿದೆ. ಇಲ್ಲಿ ಶಿಸ್ತುಬದ್ಧ ಮತ್ತು ನಿಯಮಬದ್ಧ ಜೀವನವನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿದ್ಯಾರ್ಥಿನಿಯರು ಅಧ್ಯಯನಾಭಿಲಾಷಿಗಳಾಗುವಂತೆ ಮಾಡಲಾಗಿದೆ. ಕಾಲೇಜಿಗೆ ಪ್ರವೇಶ ಪಡೆದ ಅರ್ಹ ವಿದ್ಯಾರ್ಥಿನಿಯರಿಗೆ ಅವಕಾಶ ನೀಡಲಾಗುವುದು.

**ದತ್ತಿ ಬಹುಮಾನಗಳು** : ಈ ಕೆಳಕಂಡ ಗಣ್ಯರ ಹೆಸರಲ್ಲಿ ದತ್ತಿನಿಧಿ ಸ್ಥಾಪಿಸಿ, ಬಹುಮಾನ ನೀಡುವ ವ್ಯವಸ್ಥೆಯನ್ನು ದಾನಿಗಳು ಕಲ್ಪಿಸಿದ್ದಾರೆ.

1. ಪ್ರೊ. ಬೆಂಜಮಿನ್ ಕ್ಲಾರೆನ್ಸ್‌ವೆಸ್ಲಿ
2. ಪ್ರೊ. ಬಿ.ಸಿ. ವೆಸ್ಲಿ ಮತ್ತು ಪ್ರೊ. ಜಯಲಕ್ಷ್ಮಮ್ಮಣ್ಣಿ
3. ಪ್ರೊ. ಸುರಮಬಾಯಿ
4. ಪ್ರೊ. ಗೌರೀಶಂಕರ
5. ಪ್ರೊ. ರತ್ನ ಅರಸ್
6. ವಜ್ರ ಮಹೋತ್ಸವ
7. ಹಿರಿಯ ವಿದ್ಯಾರ್ಥಿ ಸಂಘ
8. ಪ್ರೊ. ಲೀಲಾವತಿ
9. ಪ್ರೊ. ನಾಗರಾಜಯ್ಯ
10. ಪ್ರೊ. ಪದ್ಮಾವತಮ್ಮ
11. ಶ್ರೀ ಮೌಲಾನಾ ಆಜಾದ್
12. ಪ್ರೊ. ಮಹದೇವಪ್ಪ
13. ಪ್ರೊ. ನಾರಾಯಣ
14. ಡಾ. ಎಂ.ಪಿ. ಸುಧಾ
15. ಪ್ರೊ. ಕೆ.ಪಿ. ಕುಮಾರ್
16. ಶ್ರೀ ಲಕ್ಷ್ಮಣಶಾಸ್ತ್ರೀ
17. ಶ್ರೀಮತಿ ಅಮ್ಮಯ್ಯಮ್ಮ
18. ಶ್ರೀ ಕೆನ್ನಾಳು ಶಂಕರಪ್ಪ
19. ಶ್ರೀ ತಮ್ಮಯ್ಯಶೆಟ್ಟಿ
20. ಪ್ರೊ. ಎಚ್. ಜಗದಾಂಬ
21. ಪ್ರೊ. ಆರ್. ಜಾನ್‌ಸನ್ ರತ್ನಕುಮಾರ್

**ಅ) ರಾಷ್ಟ್ರೀಯ ಯುವ ಸೇನಾದಳ (ಎನ್.ಸಿ.ಸಿ.) :** ವಿದ್ಯಾರ್ಥಿನಿಯರಲ್ಲಿ ರಾಷ್ಟ್ರೀಯತೆ, ರಾಷ್ಟ್ರಪ್ರೇಮ, ಶಿಸ್ತು, ಶೌರ್ಯ, ಸೇವಾ ಭಾವನೆಯನ್ನು ಬೆಳೆಸಲು ಅವಶ್ಯಕವಾಗಿರುವ ಎನ್.ಸಿ.ಸಿ. ಘಟಕವು ನಮ್ಮ ಕಾಲೇಜಿನಲ್ಲಿದೆ. ಸಾಪ್ತಾಹಿಕ ಕವಾಯಿತು ಮತ್ತು ವಾರ್ಷಿಕ ತರಬೇತಿ ಶಿಬಿರದ ಹಾಜರಾತಿಯು ಕಡ್ಡಾಯವಾಗಿರುತ್ತದೆ.

**ಆ) ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್.) :** ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಮೂರು ಘಟಕಗಳಿವೆ. ವಿದ್ಯಾರ್ಥಿನಿಯರಲ್ಲಿ ಶ್ರಮದ ಘನತೆ ಮತ್ತು ಸೇವಾ ಮನೋಭಾವವನ್ನು ಬೆಳೆಸುವುದು ಈ ಘಟಕಗಳ ಉದ್ದೇಶ. ಸಶಕ್ತ ಸಮಾಜ ನಿರ್ಮಾಣಕ್ಕಾಗಿ ಎನ್.ಎಸ್.ಎಸ್. ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿ ಶಿಬಿರಗಳಲ್ಲಿ ಭಾಗವಹಿಸಿದವರಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಸೌಲಭ್ಯವಿರುತ್ತದೆ.

**ಇ) ಸ್ಕೌಟ್ಸ್ ಅಂಡ್ ಗೈಡ್ಸ್ (ರೇಂಜರ್ಸ್) : 2012-13** ನೇ ಸಾಲಿನಲ್ಲಿ **messanger of peace** ಎಂಬ ಧ್ಯೇಯದೊಂದಿಗೆ ಆರಂಭಗೊಂಡ ಜಯಲಕ್ಷ್ಮಮ್ಮಣ್ಣಿ ರೇಂಜರ್ಸ್ ಘಟಕವು ಮೂರು ವರ್ಷಗಳಿಂದ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಾ ಬಂದಿದೆ.

**ಈ) ರೆಡ್‌ಕ್ರಾಸ್ :** ಶಾಂತಿ, ಸಹಬಾಳ್ವೆ, ಭ್ರಾತೃತ್ವ ಇವುಗಳನ್ನು ಬೆಳೆಸಲು. ಸಂಕಷ್ಟದಲ್ಲಿರುವವರ ನೆರವಿಗೆ ಧಾವಿಸಿ, ನೈಸರ್ಗಿಕ ವಿಪತ್ತು ನಿರ್ವಹಣೆ, ಸಾಮಾಜಿಕ ಅರಿವು ಮೂಡಿಸುವಲ್ಲಿ ರೆಡ್‌ಕ್ರಾಸ್ ಸಂಸ್ಥೆಯು ಮೂರು ವರ್ಷದಿಂದ ಕಾರ್ಯನಿರ್ವಹಿಸುತ್ತಿದೆ.

**ಇ) ಆಪ್ತ ಸಮಾಲೋಚನಾ ಕೇಂದ್ರ :** ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಆಪ್ತ ಸಮಾಲೋಚನಾ ಕೇಂದ್ರವು ಮನಃಶಾಸ್ತ್ರ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳಬಹುದು.

**ಈ) ವಿದ್ಯಾರ್ಥಿ ಕ್ಷೇಮಪಾಲನೆ :** ಕಾಲೇಜಿನಲ್ಲಿ ವಿದ್ಯಾರ್ಥಿ ಕ್ಷೇಮಪಾಲನಾ ವ್ಯವಸ್ಥೆ ಇರುತ್ತದೆ. ಅದಕ್ಕಾಗಿ ಇಬ್ಬರು ಅಧ್ಯಾಪಕರು ವಿದ್ಯಾರ್ಥಿ ಕ್ಷೇಮಪಾಲನಾ ಅಧಿಕಾರಿಗಳಾಗಿ ಸೇವೆಸಲ್ಲಿಸುತ್ತಿದ್ದಾರೆ. ಇವರ ಅಧೀನದಲ್ಲಿ ದೂರು ವಿಚಾರಣಾ ಘಟಕ ಕಾರ್ಯ ನಿರ್ವಹಿಸುತ್ತಿದೆ. ಈ ಅಧಿಕಾರಿಗಳು ವಿದ್ಯಾರ್ಥಿನಿಯರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ನೆರವಾಗುತ್ತಾರೆ.

**ಉ) ಉದ್ಯೋಗ ಮಾರ್ಗದರ್ಶನ ಕೇಂದ್ರ (Placement Cell) :** ಕಾಲೇಜು ತನ್ನದೇ ಆದ ಉದ್ಯೋಗ ಮಾರ್ಗದರ್ಶನ ಕೇಂದ್ರವನ್ನು ಹೊಂದಿದ್ದು, ನಿರಂತರವಾಗಿ ವಿದ್ಯಾರ್ಥಿನಿಯರಿಗೆ ಸಲಹೆ, ಮಾರ್ಗದರ್ಶನ ನೀಡಲಾಗುವುದು. ವಿದ್ಯಾರ್ಥಿನಿಯರಿಗೆ ಸಂದರ್ಶನ, ಗುಂಪು ಚರ್ಚೆ ಮುಂತಾದವುಗಳನ್ನು ಎದುರಿಸಲು ತರಬೇತಿ ನೀಡಲಾಗುವುದು.

ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಲು, ಹೊಸ ರೀತಿಯ ಉದ್ಯೋಗಗಳನ್ನು ಪಡೆಯಲು ಸ್ಪೋಕನ್ ಇಂಗ್ಲಿಷ್ ತರಗತಿಗಳನ್ನು ನಡೆಸಲಾಗುವುದು, ಹಾಗೂ ಕ್ಯಾಂಪಸ್ ಆಯ್ಕೆ ಮಾಡಲು ಹಲವು ಸಂಸ್ಥೆಗಳೊಂದಿಗೆ ಸಂಪರ್ಕ ಕಲ್ಪಿಸುವುದು.

**ಪರೀಕ್ಷಾ ವಿಧಾನ** : ಪದವಿ ಪರೀಕ್ಷೆಗಳು ಸೆಮಿಸ್ಟರ್ ಪದ್ಧತಿಗನುಗುಣವಾಗಿ ನಡೆಯುತ್ತವೆ. ಪ್ರತಿ ವಿಷಯದಲ್ಲೂ ಆಂತರಿಕ ಮೌಲ್ಯಮಾಪನ ಹಾಗೂ ಮುಖ್ಯ ಪರೀಕ್ಷೆಗಳೆಂಬ ಎರಡು ಹಂತಗಳಿರುತ್ತವೆ.

ಆಂತರಿಕ ಮೌಲ್ಯಮಾಪನವು ಕಿರುಪರೀಕ್ಷೆ ಮತ್ತು ನಿಯೋಜಿತ ಕಾರ್ಯವನ್ನು (Assignment) ಒಳಗೊಂಡಿರುತ್ತದೆ.

| | | |
|---|---|---|
| ಆಂತರಿಕ ಮೌಲ್ಯಮಾಪನ - 20 ಅಂಕಗಳು | ಮುಖ್ಯ ಪರೀಕ್ಷೆ - 80 ಅಂಕಗಳು | ಒಟ್ಟು - 100 ಅಂಕಗಳು |

ವಿದ್ಯಾರ್ಥಿಗಳು ಉತ್ತೀರ್ಣರಾಗಲು ಪ್ರತಿ ವಿಷಯದಲ್ಲೂ ಕನಿಷ್ಠ ಶೇಕಡಾ 40 ಅಂಕಗಳನ್ನು ಪಡೆಯಬೇಕು. ಪ್ರಯೋಗಾಲಯ ಕಾರ್ಯವನ್ನು ಹೊಂದಿರುವ ವಿಷಯಗಳಾದ ಗಣಕವಿಜ್ಞಾನ, ಭೂಗೋಳಶಾಸ್ತ್ರ ಮತ್ತು ಮನಃಶಾಸ್ತ್ರಗಳಲ್ಲಿ ಮೌಲ್ಯಮಾಪನ ಈ ಕೆಳಗಿನಂತಿರುತ್ತದೆ :

| | ಆಂತರಿಕ ಮೌಲ್ಯಮಾಪನ | ಮುಖ್ಯಪರೀಕ್ಷೆ | ಒಟ್ಟು |
|---|---|---|---|
| ಥಿಯರಿ | 10 | 60 | 70 |
| ಪ್ರಯೋಗಾಲಯ | 10 | 20 | 30 |
| | ಒಟ್ಟು | | 100 |

**ನೀವು ಬಳಸಿ, ಇವು ನಿಮ್ಮನ್ನು ಬೆಳೆಸುತ್ತವೆ**

**ಹಾಜರಾತಿ ನಿಯಮಗಳು** : ಭಾರತದ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ವಿದ್ಯಾರ್ಥಿಗಳು ಶೇಕಡ 75ರಷ್ಟು ತರಗತಿ ಹಾಜರಾತಿಯನ್ನು ಪ್ರತಿ ವಿಷಯದಲ್ಲಿಯೂ ಹೊಂದಿರಬೇಕಾದುದು ಕಡ್ಡಾಯವಾಗಿರುತ್ತದೆ.

ಯಾವುದೇ ಬಗೆಯ ಕಾರಣ ಮತ್ತು ಪ್ರಮಾಣಪತ್ರಗಳ ಸಲ್ಲಿಕೆಯಿಂದ ರಿಯಾಯಿತಿ ದೊರೆಯುವುದಿಲ್ಲ. ಅಂತಹ ವಿದ್ಯಾರ್ಥಿನಿಯರಿಗೆ ಪರೀಕ್ಷೆಯನ್ನು ತೆಗೆದುಕೊಳ್ಳಲು ಅನುಮತಿ ನೀಡಲಾಗುವುದಿಲ್ಲ.

**ಕಾಲೇಜಿನ ನಿಯಮಾವಳಿಗಳು :** ವಿದ್ಯಾರ್ಥಿಗಳು ಕಾಲೇಜಿನ ನಿಯಮ ಮತ್ತು ಶಿಸ್ತನ್ನು ಪಾಲಿಸಬೇಕು. ಅನಪೇಕ್ಷಿತ ಅಲೆದಾಟ, ಹರಟೆ, ಹಾಜರಾತಿ ಕೊರತೆ, ಕಾಲೇಜಿನ ಆವರಣದೊಳಗೆ ಮೊಬೈಲ್ ಬಳಕೆ ನಿಷೇಧದ ಉಲ್ಲಂಘನೆ, ದುರ್ನಡತೆ, ವ್ಯಾಸಂಗ ನಿರ್ಲಕ್ಷ್ಯತೆ, ಅವಿಧೇಯತೆಯಂತಹ ಅಶಿಸ್ತಿನ ವರ್ತನೆ ನಿಷಿದ್ಧ, ವರ್ತಿಸಿದಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುವುದು.

**ಆಂತರಿಕ ಅಂಕಗಳು** : ಕಿರುಪರೀಕ್ಷೆ ಮತ್ತು ನಿಯೋಜಿತ ಪ್ರಬಂಧ : ವಿ.ವಿ. ನಿಯಮಾನುಸಾರ ಪ್ರತಿಯೊಂದು ವಿಷಯಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿನಿಯರಿಗೆ ಕಿರುಪರೀಕ್ಷೆ ಮತ್ತು ನಿಯೋಜಿತ ಕಾರ್ಯ / ಪ್ರಬಂಧಗಳು ಇರುತ್ತವೆ. ಇವುಗಳನ್ನು ಅಧ್ಯಾಪಕರು ಮೌಲ್ಯಮಾಪನ ಮಾಡಿ ಆಂತರಿಕ ಅಂಕಗಳನ್ನು ನೀಡುತ್ತಾರೆ. ಇದು ಕಡ್ಡಾಯ. ಪ್ರತಿಯೊಬ್ಬ ವಿದ್ಯಾರ್ಥಿನಿಯೂ ಆಂತರಿಕ ಪರೀಕ್ಷೆಗಳಿಗೆ ತಪ್ಪದೆ ಹಾಜರಾಗಬೇಕು.

**ಕಂಪ್ಯೂಟರ್ ಕೇಂದ್ರಗಳು : ಅಂತರ್ಜಾಲ ಸೌಲಭ್ಯ** : ಪದವಿ ಶಿಕ್ಷಣ ಕಂಪ್ಯೂಟರ್ ಕಲಿಕೆಯಿಲ್ಲದೆ ಅಪೂರ್ಣ. ನಮ್ಮ ವಿದ್ಯಾರ್ಥಿನಿಯರು ಬದಲಾಗುತ್ತಿರುವ ಉದ್ಯೋಗ ಮಾರುಕಟ್ಟೆಗೆ ಹೊಂದಿಕೊಳ್ಳಲು ಮಾಹಿತಿ ತಂತ್ರಜ್ಞಾನದ ಉಪಯೋಗದಿಂದ ಜ್ಞಾನಾರ್ಜನೆಗೆ ಸಹಾಯವಾಗಲು ವಿದ್ಯಾರ್ಥಿನಿಯರಿಗೆ ಸುಸಜ್ಜಿತ ಅಂತರ್ಜಾಲ ಸಂಪರ್ಕ ಹೊಂದಿದ ಕಂಪ್ಯೂಟರ್ ಕೇಂದ್ರ ವ್ಯವಸ್ಥೆಯನ್ನು ಗ್ರಂಥಾಲಯದಲ್ಲಿ ಮತ್ತು ಗಣಕ ವಿಜ್ಞಾನ ವಿಭಾಗದಲ್ಲಿ ಮಾಡಲಾಗಿದೆ. ಹಾಗೂ 'J-Gate E-ಜರ್ನಲ್', Wifi, Lan - Net working, Inflib networking, knowledge commission ಕೂಡ ಲಭ್ಯವಿರುತ್ತದೆ. ಅದರ ಉಪಯೋಗ ಪಡೆದುಕೊಳ್ಳತಕ್ಕದ್ದು.

ಗ್ರಂಥಾಲಯ : ನಮ್ಮ ಕಾಲೇಜಿನ ಗ್ರಂಥಾಲಯವು, 1,00,000ಕ್ಕಿಂತಲೂ ಹೆಚ್ಚು ಉಪಯುಕ್ತ ಪುಸ್ತಕಗಳನ್ನುಳ್ಳ ಜ್ಞಾನಭಂಡಾರವಾಗಿದೆ. ಅಧ್ಯಾಪಕರ ಮತ್ತು ವಿದ್ಯಾರ್ಥಿನಿಯರ ಉಪಯೋಗಕ್ಕಾಗಿ ಪರಾಮರ್ಶನ ವಿಭಾಗ (ರೆಫರೆನ್ಸ್ ಸೆಕ್ಷನ್) ಇದೆ. ಪರಿಶಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿನಿಯರಿಗೆ ವಿಶೇಷವಾದ ಬುಕ್‌ಬ್ಯಾಂಕ್ ವ್ಯವಸ್ಥೆಯಿದೆ. ಗ್ರಂಥಾಲಯದಲ್ಲಿ ಸಾಮಾನ್ಯ ಪುಸ್ತಕಗಳು, ಪಠ್ಯಪುಸ್ತಕಗಳು, ವಿಶ್ವಕೋಶಗಳು ಇವೆ.

**ವಾಚನಾಲಯ** : ಸಾಮಾನ್ಯಜ್ಞಾನ ಮತ್ತು ಲೋಕ ವ್ಯವಹಾರ ತಿಳಿಯಲು ಕಾಲೇಜಿನಲ್ಲಿ ಸುಸಜ್ಜಿತ, ವಿಶಾಲ ವಾಚನಾಲಯವಿದೆ. ವಿವಿಧ ಭಾಷೆಗಳ ವೈವಿಧ್ಯಮಯ ನಿಯತಕಾಲಿಕೆಗಳು, ದೈನಂದಿನ ವರ್ತಮಾನ ಪತ್ರಿಕೆಗಳು, ವಾರ್ತಾಸಂಚಿಕೆಗಳು, ವಾರ ಮತ್ತು ಮಾಸ ಪತ್ರಿಕೆಗಳು ನಮ್ಮ ವಾಚನಾಲಯದಲ್ಲಿ ಲಭ್ಯವಿದೆ.

**ಕ್ರೀಡೆಗಳು** : ನಮ್ಮ ಕಾಲೇಜು ಕ್ರೀಡಾ ಚಟುವಟಿಕೆಗಳ ಪ್ರಶಂಸಾರ್ಹ ಪರಂಪರೆಯನ್ನು ಹೊಂದಿದೆ. ಏಷ್ಯಾಡ್‌ನಂತಹ ಪ್ರತಿಷ್ಠಿತ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಕಾಲೇಜಿಗಲ್ಲದೆ ನಮ್ಮ ರಾಜ್ಯ ಮತ್ತು ರಾಷ್ಟ್ರಕ್ಕೆ ಖ್ಯಾತಿ ತಂದ ರೀತ್ ಅಬ್ರಾಹಂ, ನೀತ್ ದೇವಯ್ಯ, ಪ್ರೀತ್ ದೇವಯ್ಯರಂತಹ ಕ್ರೀಡಾಮಣಿಗಳನ್ನು ನಾಡಿಗೆ ಕೊಡುಗೆಯಾಗಿ ನೀಡಿದ ಕಾಲೇಜು ನಮ್ಮದು. ವಿಶ್ವವಿದ್ಯಾನಿಲಯ, ಅಂತರ್ ವಿಶ್ವವಿದ್ಯಾನಿಲಯ, ರಾಜ್ಯ, ರಾಷ್ಟ್ರಮಟ್ಟದಲ್ಲಿ ಗೆದ್ದು ಬಿರುದುಗಳನ್ನು ಪಡೆದ ವಿದ್ಯಾರ್ಥಿನಿಯರ ತಾಣವಿದು. ವಿವಿಧ ಕ್ರೀಡಾ ಸೌಲಭ್ಯಗಳನ್ನು ಒದಗಿಸಿ ನಿರಂತರ ತರಬೇತಿಯನ್ನು ನೀಡಲಾಗುತ್ತಿದೆ. ಕಾಲೇಜು 200 ಮೀಟರಿನ ಓಟದ ಮೈದಾನವನ್ನು ಹೊಂದಿರುವುದು ಹೆಮ್ಮೆಯ ವಿಷಯ. ನುರಿತ ದೈಹಿಕ ಶಿಕ್ಷಕರ ಮತ್ತು ವಿಶ್ವವಿದ್ಯಾನಿಲಯ ಕ್ರೀಡಾ ವಿಭಾಗದ ತರಬೇತಿದಾರರ ಮಾರ್ಗದರ್ಶನದಲ್ಲಿ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ. ಕಾಲೇಜು ಕ್ರಿಕೆಟ್, ಬ್ಯಾಸ್ಕೆಟ್‌ಬಾಲ್, ಥ್ರೋಬಾಲ್, ಟೆನ್ನಿಕಾಯ್ಟ್, ಬ್ಯಾಡ್‌ಮಿಂಟನ್, ಟೇಬಲ್ ಟೆನ್ನಿಸ್, ಚೆಸ್, ಕೇರಮ್ ಮುಂತಾದ ಆಟದ ಸೌಲಭ್ಯಗಳನ್ನು ಹೊಂದಿದೆ. ಕ್ರೀಡಾಪಟುಗಳಿಗೆ ಸಹಾಯಕವಾಗಿ ಅನೇಕ ವಿವಿಧ ಸ್ಕಾಲರ್‌ಶಿಪ್‌ಗಳು, ನಗದು ಬಹುಮಾನಗಳು, ಸಮವಸ್ತ್ರ, ಉಪಾಹಾರ, ಪ್ರವಾಸ ಭತ್ಯೆ ಮುಂತಾದ ಪ್ರೋತ್ಸಾಹದಾಯಕ ಸವಲತ್ತುಗಳನ್ನೂ ನೀಡಲಾಗುತ್ತದೆ.

## ನೀವು ಪಾಲ್ಗೊಳ್ಳಲು ಇರುವ ನಿಮ್ಮದೇ ವೇದಿಕೆಗಳು

**ಅಭಿವ್ಯಕ್ತಿ :** ಕಾಲೇಜಿನಲ್ಲಿ ವಿದ್ಯಾರ್ಥಿನಿಯರ ಬರಹ, ಕರಕುಶಲತೆ, ಚಿತ್ರಕಲೆ ಮೊದಲಾದ ಸಾಮರ್ಥ್ಯಗಳನ್ನು ಪ್ರಕಟಪಡಿಸಲು 'ಅಭಿವ್ಯಕ್ತಿ' ಎಂಬ ವೇದಿಕೆಯಿದೆ. ವೇದಿಕೆಯ ಅಡಿಯಲ್ಲಿ ಬರಹಗಳ ಗೋಡೆಪತ್ರಿಕೆ, ಕರಕುಶಲ ಪ್ರದರ್ಶನ, ಕಮ್ಮಟ ಮೊದಲಾದ ಕಾರ್ಯಕ್ರಮಗಳು ನಡೆಯುತ್ತವೆ.

**ಹೆಜ್ಜೆಗುರುತು :** ಕಾಲೇಜಿನ ಶೈಕ್ಷಣಿಕ ಪ್ರಗತಿಯನ್ನೊಳಗೊಂಡ ತ್ರೈಮಾಸಿಕ ಪತ್ರಿಕೆ "ಹೆಜ್ಜೆಗುರುತು". ನಮ್ಮ ವಿದ್ಯಾರ್ಥಿನಿಯರ ಸಾಧನೆಯ ಹಾದಿಯನ್ನಿಲ್ಲಿ ಕಾಣಬಹುದು.

**ಸ್ಪಂದನ :** ಇದು ನಮ್ಮ ವಾರ್ಷಿಕ ಸಂಚಿಕೆ. ಆಯಾ ಶೈಕ್ಷಣಿಕ ವರ್ಷದ ಕಾಲೇಜಿನ ಸಮಗ್ರ ವರದಿಯನ್ನೊಳಗೊಂಡಂತೆ ಸಾಧನೆಯ ಸಾಕ್ಷ್ಯಚಿತ್ರದಂತಿರುವ ಭಾವಚಿತ್ರಗಳು, ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ದಾಖಲಾಗುವ ವಿದ್ಯಾರ್ಥಿನಿಯರ ಪ್ರತಿಭೆಯ ಅಕ್ಷರಲೋಕದ ಅನಾವರಣ ಈ ವಾರ್ಷಿಕ ಸಂಚಿಕೆಯಲ್ಲಾಗುತ್ತದೆ. ಅಧ್ಯಾಪಕ ಸಂಪಾದಕರೊಂದಿಗೆ ವಿದ್ಯಾರ್ಥಿನಿ ಸಂಪಾದಕಿಯೂ ಒಳಗೊಂಡ ಸಂಪಾದನ ಸಮಿತಿಯು ಇದನ್ನು ರೂಪಿಸುತ್ತದೆ. 'ಸ್ಪಂದನ' ಮೈ.ವಿ.ವಿ.ಯಿಂದ ಹಲವು ಬಾರಿ ಬಹುಮಾನ ಪಡೆದಿದೆ.

**ಸಾಂಸ್ಕೃತಿಕ ವೇದಿಕೆ :** ವಿದ್ಯಾರ್ಥಿನಿಯರಲ್ಲಿ ಸಾಂಸ್ಕೃತಿಕ ನಾಯಕತ್ವದ ನಿರ್ಮಾಣಕ್ಕಾಗಿ ಸಾಂಸ್ಕೃತಿಕ ವೇದಿಕೆಯಿದೆ. ಪ್ರತಿಯೊಂದು ತರಗತಿ ಪ್ರತಿನಿಧಿಗಳನ್ನು ಒಳಗೊಂಡ ಪ್ರತಿಯೊಬ್ಬ ವಿದ್ಯಾರ್ಥಿನಿಯ ಅಭಿಪ್ರಾಯದೊಂದಿಗೆ ರೂಪಿಸಿದ ವೇದಿಕೆಯಿದು. ಅಧ್ಯಾಪಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿನಿ ಪ್ರತಿನಿಧಿಗಳೇ ವರ್ಷಪೂರ್ಣ ಸಾಂಸ್ಕೃತಿಕ, ಶೈಕ್ಷಣಿಕ, ಸೇವಾ ಚಟುವಟಿಕೆಗಳನ್ನು ಸಂಘಟಿಸುತ್ತಾರೆ.

**ಕನ್ನಡ ಸಂಘ :** ನಮ್ಮ ಕಾಲೇಜಿನ ಕನ್ನಡ ವಿಭಾಗದ ವತಿಯಿಂದ ಕನ್ನಡ ಸಂಘವು ರೂಪುಗೊಂಡಿದೆ. ಅದರ ಅಡಿಯಲ್ಲಿ ವಿದ್ಯಾರ್ಥಿನಿಯರಿಗಾಗಿ ಕಥೆ, ಕಾವ್ಯ, ಅಭಿನಯ, ಸಂಗೀತ ಕಮ್ಮಟಗಳನ್ನು ಹಾಗೂ ಸಾಹಿತ್ಯಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ.

**ಪರಿಸರ ಕೂಟ :** ಪರಿಸರ ವಿಜ್ಞಾನ ವಿಭಾಗದ ಅಡಿಯಲ್ಲಿ 'ಪರಿಸರ ಕೂಟ'ವನ್ನು ರಚಿಸಲಾಗಿದೆ. ವಿದ್ಯಾರ್ಥಿನಿಯರಿಗೆ ಅನೇಕ ವಿಭಿನ್ನ ಪ್ರಾಕೃತಿಕ ಪರಿಸರವನ್ನು ಕಂಡು ಅರ್ಥೈಸಿಕೊಳ್ಳುವ ನಿಮಿತ್ತ ಪ್ರಾಯೋಗಿಕ ಭೇಟಿಗಳನ್ನು ಕೈಗೊಳ್ಳಲಾಗುವುದು.

**ವಿಚಾರ ಸಂಕಿರಣಗಳು :** ವಿವಿಧ ವಿಭಾಗಗಳು ಯು.ಜಿ.ಸಿ. ಪ್ರಾಯೋಜಿತವಾದ ವಿಶ್ವವಿದ್ಯಾನಿಲಯ, ರಾಜ್ಯ, ರಾಷ್ಟ್ರಮಟ್ಟದ ವಿವಿಧ ವಿಷಯಗಳ ವಿಚಾರ ಸಂಕಿರಣಗಳನ್ನು ಸಂಘಟಿಸುತ್ತಿವೆ.

**ಪರಂಪರೆ ಕೂಟ :** ಇತಿಹಾಸ ವಿಭಾಗದಡಿಯಲ್ಲಿ 'ಪರಂಪರೆ ಕೂಟ' ಸ್ಥಾಪಿಸಲಾಗಿದೆ. ಇತಿಹಾಸ ಪರಂಪರೆಯನ್ನು ಪರಿಚಯಿಸುವ ವಿಶೇಷ ಉಪನ್ಯಾಸಗಳು ಹಾಗೂ ಶೈಕ್ಷಣಿಕ ಇತಿಹಾಸ ಸ್ಥಳಗಳ ಭೇಟಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

**ಮಹಿಳಾ ಹಿತರಕ್ಷಣಾ ಸಮಿತಿ :** ವಿಶ್ವವಿದ್ಯಾನಿಲಯ ಹಾಗೂ ಸರ್ಕಾರದ ನಿಯಮಾನುಸಾರ ಮಹಿಳಾ ದೌರ್ಜನ್ಯ ವಿಚಾರಣಾ ವೇದಿಕೆಯನ್ನು ಕಾಲೇಜಿನಲ್ಲಿ ರಚಿಸಲಾಗಿದೆ. ಮಹಿಳೆಯರ ಮೇಲೆ ಉಂಟಾಗುವ ದೌರ್ಜನ್ಯದ ದೂರುಗಳು ಹಾಗೂ ಕುಂದುಕೊರತೆಗಳನ್ನು ಇಲ್ಲಿ ದಾಖಲಿಸಬಹುದು. ಸಂಚಾಲಕರು ಹಾಗೂ ಸಮಿತಿಯು ಸೂಕ್ತ ವಿಚಾರಣೆಯೊಂದಿಗೆ ಕ್ರಮಕ್ಕೆ ಶಿಫಾರಸ್ಸು ಮಾಡುತ್ತದೆ.

**ಪರಿಹಾರಾತ್ಮಕ ಬೋಧನಾ ಕೇಂದ್ರ (ರೆಮಿಡಿಯಲ್ ಕೋಚಿಂಗ್ ಸೆಲ್) :** ಕಾಲೇಜಿನಲ್ಲಿ ಓದುತ್ತಿರುವ ಪ.ಜಾ., ಪ.ಪ., ಹಿಂ. ವರ್ಗ ಹಾಗೂ ಅಲ್ಪಸಂಖ್ಯಾತ ವಿದ್ಯಾರ್ಥಿನಿಯರ ಶೈಕ್ಷಣಿಕ ಗುಣಮಟ್ಟಕ್ಕಾಗಿ ವಿಶೇಷ ಬೋಧನೆಯನ್ನು ಯುಜಿಸಿ ಅಡಿಯಲ್ಲಿ ನೀಡುವ ರೆಮಿಡಿಯಲ್ ಕೋಚಿಂಗ್ ಸೆಂಟರ್‌ನ್ನು ಪ್ರಾರಂಭಿಸಲಾಗಿದೆ.

**ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ :** ಪದವಿ ವಿದ್ಯಾರ್ಥಿನಿಯರಿಗೆ ಕೆ.ಎ.ಎಸ್., ಐ.ಎ.ಎಸ್. ಮೊದಲಾದ ಸ್ಪರ್ಧಾತ್ಮ ಪರೀಕ್ಷೆಗಳ ಬಗೆಗೆ ಮಾಹಿತಿ ಮಾರ್ಗದರ್ಶನಗಳನ್ನು ನೀಡುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

**ನೈಪುಣ್ಯ ನಿಧಿ :** ಸರ್ಕಾರದ ಯೋಜನೆಯಂತೆ ಅಂತಿಮ ಪದವಿ ವಿದ್ಯಾರ್ಥಿನಿಯರಿಗೆ ಉದ್ಯೋಗ ಕೌಶಲ್ಯಗಳ ತರಬೇತಿ ನೀಡಲಾಗುವುದು.

**ಸಿಓಪಿ :** ಎಲ್ಲಾ ವಿದ್ಯಾರ್ಥಿನಿಯರಿಗಾಗಿ ವೃತ್ತಿಪರ ಶೈಕ್ಷಣಿಕ ಕೋರ್ಸುಗಳನ್ನು ಪ್ರಾರಂಭಿಸಲಾಗಿದೆ.

1) Computer Soft Skill 2) Insurance Management 3) Marketing Management

## ಸ್ನಾತಕೋತ್ತರ ಕೇಂದ್ರ

ಕಾಲೇಜಿನಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರವಿದ್ದು ಉನ್ನತ ಶಿಕ್ಷಣದ ವಿಸ್ತತ ನೆಲೆಯಾಗಿ ಕಾಲೇಜು ಮಾನ್ಯತೆ ಗಳಿಸಿದೆ.

ಕಾಲೇಜಿನಲ್ಲಿರುವ ಸ್ನಾತಕೋತ್ತರ ವಿಭಾಗಗಳು

**ಕಲಾವಿಭಾಗ (ಎಂ.ಎ.)**

- ಇಂಗ್ಲಿಷ್
- ಅರ್ಥಶಾಸ್ತ್ರ
- ರಾಜ್ಯಶಾಸ್ತ್ರ
- ಸಮಾಜಶಾಸ್ತ್ರ
- ಇತಿಹಾಸ
- ಸಾರ್ವಜನಿಕ ಆಡಳಿತ

**ವಿಜ್ಞಾನ ವಿಭಾಗ (ಎಂ.ಎಸ್‌ಸಿ.)**

- ಮನೋವಿಜ್ಞಾನ
- ಭೂಗೋಳಶಾಸ್ತ್ರ



ಅಖಿಲ ಕರ್ನಾಟಕ ಜಯಲಕ್ಷ್ಮಮ್ಮಣ್ಣಿ ಸಂಗೀತ ಸ್ಪರ್ಧೆಯ ಬಹುಮಾನ ವಿತರಣೆ



ಬಸವಜಯಂತಿ ಆಚರಣೆ

## ನಮ್ಮ ಕಾಲೇಜಿನ ಅಧ್ಯಾಪಕ ವೃಂದ

### ಪ್ರೊ. ಎಂ. ಪುರುಷೋತ್ತಮ್

ಪ್ರಾಂಶುಪಾಲರು

**ಕನ್ನಡ ವಿಭಾಗ**

| | |
|---|---|
| **ಪ್ರೊ. ವರದರಾಜು ಎಂ.** | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು |
| **ಡಾ. ವಸಂತಕುಮಾರ್ ಬಿ.ವಿ.** | ಸಹ ಪ್ರಾಧ್ಯಾಪಕರು |
| ಡಾ. ರೇಣು ಆರ್. | ಸಹ ಪ್ರಾಧ್ಯಾಪಕರು (ನಿಯೋಜನೆ) |
| ಪ್ರೊ. ವಿಜಯಲಕ್ಷ್ಮಿ (FIP) | ಸಹ ಪ್ರಾಧ್ಯಾಪಕರು |
| ಡಾ. ನೇತ್ರಾವತಿ | ಸಹ ಪ್ರಾಧ್ಯಾಪಕರು |
| ಡಾ. ಕಲಾಶ್ರೀ ಹೆಚ್.ಎಂ. | ಸಹ ಪ್ರಾಧ್ಯಾಪಕರು |
| ಡಾ. ಲತಾ ಕೆ.ಎ. | ಸಹ ಪ್ರಾಧ್ಯಾಪಕರು |
| ಪ್ರೊ. ಜಗದೀಶ್ ಟಿ.ಎಲ್. | ಸಹಾಯಕ ಪ್ರಾಧ್ಯಾಪಕರು |
| ಪ್ರೊ. ನಂಜುಂಡಯ್ಯ ಎಂ. | ಸಹಾಯಕ ಪ್ರಾಧ್ಯಾಪಕರು |
| ಪ್ರೊ. ಎಂ. ದೇವಮ್ಮಣ್ಣಿ | ಸಹಾಯಕ ಪ್ರಾಧ್ಯಾಪಕರು |
| ಡಾ. ಶಂಕರೇಗೌಡ ಎನ್.ಎಸ್. | ಸಹಾಯಕ ಪ್ರಾಧ್ಯಾಪಕರು (ನಿಯೋಜನೆ) |

**ಆಂಗ್ಲಭಾಷಾ ವಿಭಾಗ**

| | |
|---|---|
| ಪ್ರೊ. ನೂರ್ ಫಾತಿಮ | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು |
| ಪ್ರೊ. ಭಾಗ್ಯ ಜಿ.ಎಸ್. | ಸಹ ಪ್ರಾಧ್ಯಾಪಕರು |
| ಪ್ರೊ. ಗೀತಾ ಗಂಗಾಧರನ್ | ಸಹ ಪ್ರಾಧ್ಯಾಪಕರು |
| ಪ್ರೊ. ನೇತ್ರಾವತಿ ಎಂ. | ಸಹ ಪ್ರಾಧ್ಯಾಪಕರು |
| ಪ್ರೊ. ರಜನಿ ಬಿ.ಕೆ. | ಸಹ ಪ್ರಾಧ್ಯಾಪಕರು |

**ಹಿಂದಿ ವಿಭಾಗ**

| | |
|---|---|
| ಡಾ. ಸೌಭಾಗ್ಯಲಕ್ಷ್ಮಿ ವಿ. | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು |
| ಡಾ. ಶಾಲಿವಾಹನ ಬಿ. ಕೊಳ್ಳೂರೆ | ಸಹ ಪ್ರಾಧ್ಯಾಪಕರು |

**ಸಂಸ್ಕೃತ ವಿಭಾಗ**

| | |
|---|---|
| ಪ್ರೊ. ನಾಗಲಕ್ಷ್ಮಿ ಎನ್. | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು |

**ಉರ್ದು ವಿಭಾಗ**

| | |
|---|---|
| ಪ್ರೊ. ಹಫೀಜಾ ಜಬೀನ್ ಟಿ.ಎಫ್ | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು |
| ಪ್ರೊ. ಫಾತಿಮಾನಿಸ ಬೇಗಂ | ಸಹ ಪ್ರಾಧ್ಯಾಪಕರು (ನಿಯೋಜನೆ) |

**ಇತಿಹಾಸ ವಿಭಾಗ**

| | |
|---|---|
| ಡಾ. ಸುಧಾಮಣಿ ಬಿ.ವಿ. | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು |
| ಪ್ರೊ. ರಾಮು ಎನ್. | ಸಹ ಪ್ರಾಧ್ಯಾಪಕರು |
| ಪ್ರೊ. ಜಾನೆಟ್ ಎಂ. | ಸಹ ಪ್ರಾಧ್ಯಾಪಕರು |
| ಪ್ರೊ. ರಾಮಪ್ರಸಾದ್ ಕೆ.ಎಸ್. | ಸಹ ಪ್ರಾಧ್ಯಾಪಕರು |
| ಪ್ರೊ. ನಾಗರಾಜು ಜೆ. | ಸಹ ಪ್ರಾಧ್ಯಾಪಕರು |
| ಪ್ರೊ. ಶಂಕರೇಗೌಡ ಹೆಚ್.ಎಸ್. | ಸಹ ಪ್ರಾಧ್ಯಾಪಕರು |
| ಪ್ರೊ. ರಾಜಶೇಖರನ್ | ಸಹ ಪ್ರಾಧ್ಯಾಪಕರು |
| ಪ್ರೊ. ಬಸವರಾಜು ಹೆಚ್.ಎಂ. | ಸಹ ಪ್ರಾಧ್ಯಾಪಕರು |
| ಪ್ರೊ. ಶೈಲಜಾ ಬಿ.ಎಸ್. | ಸಹಾಯಕ ಪ್ರಾಧ್ಯಾಪಕರು |
| ಡಾ. ಸಿಸ್ಟರ್ ಆನ್ ಮೇರಿ | ಸಹ ಪ್ರಾಧ್ಯಾಪಕರು (ಮ.ಹಂ.) |

**ಅರ್ಥಶಾಸ್ತ್ರ ವಿಭಾಗ**

| | |
|---|---|
| ಪ್ರೊ. ನಂಜುಂಡಸ್ವಾಮಿ ಎನ್. | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು |
| ಪ್ರೊ. ದೊರೆಸ್ವಾಮಿ ಡಿ. | ಸಹ ಪ್ರಾಧ್ಯಾಪಕರು |
| ಪ್ರೊ. ರೂಪ ಕೆ.ಎನ್. (FIP) | ಸಹ ಪ್ರಾಧ್ಯಾಪಕರು |
| ಡಾ. ರಶ್ಮಿ ಚನ್ನಯ್ಯ | ಸಹ ಪ್ರಾಧ್ಯಾಪಕರು |
| ಡಾ. ಶಶಿಕಲಾ | ಸಹ ಪ್ರಾಧ್ಯಾಪಕರು |
| ಪ್ರೊ. ಪುಟ್ಟರಾಜು | ಸಹಾಯಕ ಪ್ರಾಧ್ಯಾಪಕರು |
| ಡಾ. ರತ್ನ ಎನ್. | ಸಹಾಯಕ ಪ್ರಾಧ್ಯಾಪಕರು |
| ಡಾ. ಕೃಷ್ಣಮೂರ್ತಿ ಎನ್.ಟಿ. | ಸಹಾಯಕ ಪ್ರಾಧ್ಯಾಪಕರು |
| ಪ್ರೊ. ದೊಡ್ಡೇಗೌಡ ಕೆ.ಆರ್. | ಸಹಾಯಕ ಪ್ರಾಧ್ಯಾಪಕರು (ನಿಯೋಜನೆ) |

**ಸಮಾಜಶಾಸ್ತ್ರ ವಿಭಾಗ**

| | |
|---|---|
| ಪ್ರೊ. ಗ್ರೇಸಿ ವಾಸಂತಿ ಡಿ. | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು |
| ಪ್ರೊ. ಲೀಲಮ್ಮ ಜೆ. | ಸಹ ಪ್ರಾಧ್ಯಾಪಕರು |
| ಡಾ. ಮಾಯದೇವಿ ಎನ್. | ಸಹ ಪ್ರಾಧ್ಯಾಪಕರು |
| ಡಾ. ಕೆ.ಎನ್. ಲೋಕೇಶ್ | ಸಹ ಪ್ರಾಧ್ಯಾಪಕರು |

**ತತ್ವಶಾಸ್ತ್ರ ವಿಭಾಗ**

| | |
|---|---|
| ಡಾ. ದಶರಥ್ ಆರ್. | ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು |

**ಭೂಗೋಳಶಾಸ್ತ್ರ ಪರಿಸರ ಅಧ್ಯಯನ ವಿಭಾಗ**

ಪ್ರೊ. ಕಲಾವತಿ — ಸಹ ಪ್ರಾಧ್ಯಾಪಕರು

ಡಾ. ವಸುಮ ಎಂ.ಜಿ — ಸಹ ಪ್ರಾಧ್ಯಾಪಕರು

ಪ್ರೊ. ಸರಿತ ಕೆ. — ಸಹಾಯಕ ಪ್ರಾಧ್ಯಾಪಕರು

ಪ್ರೊ. ನಾಗರಾಜು ಎನ್. — ಸಹ ಪ್ರಾಧ್ಯಾಪಕರು

**ರಾಜ್ಯಶಾಸ್ತ್ರ ವಿಭಾಗ**

ಪ್ರೊ. ಸುಂದರ್ ಎಂ. — ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಪ್ರೊ. ಪ್ರಕಾಶ್ ಸಿ.ಹೆಚ್. — ಸಹ ಪ್ರಾಧ್ಯಾಪಕರು

ಪ್ರೊ. ವಸಂತದೇವಿ ಹೆಚ್.ಕೆ. — ಸಹ ಪ್ರಾಧ್ಯಾಪಕರು

ಪ್ರೊ. ಸುಮ ಎ. — ಸಹಾಯಕ ಪ್ರಾಧ್ಯಾಪಕರು

ಪ್ರೊ. ಸುನೀಲ್‌ಕುಮಾರ್ ಎಸ್. — ಸಹಾಯಕ ಪ್ರಾಧ್ಯಾಪಕರು

ಅನುರಾಧ ಎನ್. — ಸಹಾಯಕ ಪ್ರಾಧ್ಯಾಪಕರು

**ಮನಃಶಾಸ್ತ್ರ ವಿಭಾಗ**

ಪ್ರೊ. ಮನೋನ್ಮಣಿ ಎಂ.ಎಸ್. — ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಪ್ರೊ. ಸೋಮಣ್ಣ ಹೆಚ್.ಪಿ. — ಸಹಾಯಕ ಪ್ರಾಧ್ಯಾಪಕರು

ಪ್ರೊ. ರಜನಿ ಐತಾಳ್ — ಸಹಾಯಕ ಪ್ರಾಧ್ಯಾಪಕರು

ಪ್ರೊ. ತೇಜಸ್ವಿನಿ ಬಿ.ಪಿ. — ಸಹಾಯಕ ಪ್ರಾಧ್ಯಾಪಕರು

ಡಾ. ಜಯರಾಜು ಆರ್. — ಸಹಾಯಕ ಪ್ರಾಧ್ಯಾಪಕರು

**ಗಣಕವಿಜ್ಞಾನ ವಿಭಾಗ**

ಪ್ರೊ. ನಾಗಲಕ್ಷ್ಮೀ ಹೆಚ್.ಎಸ್. — ಸಹಾಯಕ ಪ್ರಾಧ್ಯಾಪಕರು (ನಿಯೋಜನೆ)

**ಕ್ರೀಡಾ ವಿಭಾಗ**

ಪ್ರೊ. ಸಂಗೀತ ಕೆ. — ದೈಹಿಕ ಶಿಕ್ಷಣ ನಿರ್ದೇಶಕರು

**ಗ್ರಂಥಪಾಲಕರು**

ಶ್ರೀನಿವಾಸಮೂರ್ತಿ ಐ.ಜಿ.

ರವಿಶಂಕರ್ ಜಿ.ಬಿ. (ಮ.ಹಂ.)

**ಎಫ್.ಐ.ಪಿ. ನಿಯೋಜನೆ**

ಡಾ. ರಾಜಮಣಿ ಎಂ.ಬಿ. — ಕನ್ನಡ ವಿಭಾಗ

ಡಾ. ಕಿರಣ್ ಎಸ್.ಪಿ. — ಅರ್ಥಶಾಸ್ತ್ರ ವಿಭಾಗ

## 2015–16ನೇ ಸಾಲಿನ ಬೋಧಕರ ಪಟ್ಟಿ (ಸ್ನಾತಕೋತ್ತರ)

**ಆಂಗ್ಲಭಾಷಾ ವಿಭಾಗ**

ಪ್ರೊ. ಅಣ್ಣಾಜಿಗೌಡ ಡಿ. (ನಿ.) — ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಡಾ. ರಾಜೀವ ಪೂರ್ಣಚಂದ್ರ — ಸಂಯೋಜಕರು

ಡಾ. ಪರಶಿವಮೂರ್ತಿ ಹೆಚ್.ಎಸ್. — ಸಹಾಯಕ ಪ್ರಾಧ್ಯಾಪಕರು

**ಅರ್ಥಶಾಸ್ತ್ರ ವಿಭಾಗ**

ಡಾ. ಬಸೀರತ್ ಸುಲ್ತಾನ — ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಡಾ. ಪುಟ್ಟರಾಜ — ಸಹ ಪ್ರಾಧ್ಯಾಪಕರು

ಡಾ. ರೇಷ್ಮ ಚಂಗಪ್ಪ — ಸಹ ಪ್ರಾಧ್ಯಾಪಕರು

ಡಾ. ಸೋಮಶೇಖರಯ್ಯ ಎನ್.ಟಿ. — ಸಹ ಪ್ರಾಧ್ಯಾಪಕರು

**ಭೂಗೋಳಶಾಸ್ತ್ರ ವಿಭಾಗ**

ಡಾ. ಶ್ರೀಕಂಠ ಪ್ರಸಾದ್ ಎಸ್. — ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಡಾ. ಹೇಮಚಂದ್ರ ಪಿ.ಎನ್. — ಸಹ ಪ್ರಾಧ್ಯಾಪಕರು

**ರಾಜ್ಯಶಾಸ್ತ್ರ ವಿಭಾಗ**

ಪ್ರೊ. ವೆಂಕಟಶೆಟ್ಟಿ ಟಿ. — ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

**ಸಾರ್ವಜನಿಕ ಆಡಳಿತ**

ಡಾ. ಅಣ್ಣೇಗೌಡ — ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಶ್ವೇತಾ ಎಸ್. — ಎಫ್.ಐ.ಪಿ.

**ಮನಃಶಾಸ್ತ್ರ ವಿಭಾಗ**

ಡಾ. ವೇಣುಗೋಪಾಲ್ ಎ.ಬಿ. — ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಡಾ. ಚಂದ್ರಕಾಂತ ಜಮಾದಾರ್ — ಸಹ ಪ್ರಾಧ್ಯಾಪಕರು

**ಇತಿಹಾಸ ವಿಭಾಗ**

ಡಾ. ಅನಿತ ಎಂ.ಎಸ್.ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಡಾ. ಶ್ರೀನಿವಾಸ ವ್ಹಿ ಕಾನಡೆ — ಸಹ ಪ್ರಾಧ್ಯಾಪಕರು

ಡಾ. ಕವಿತಾ — ಸಹ ಪ್ರಾಧ್ಯಾಪಕರು

**ಸಮಾಜಶಾಸ್ತ್ರ ವಿಭಾಗ**

ಪ್ರೊ. ವಿಜಯ್ ಬಿ.ಟಿ.ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು

ಡಾ. ಸೌಮ್ಯಕುಮಾರ್ — ಸಹಪ್ರಾಧ್ಯಾಪಕರು

## ನಮ್ಮ ಆಡಳಿತ ವೃಂದ

ಸರ್ವಶ್ರೀ / ಶ್ರೀಮತಿ

| | |
|---|---|
| ನಾಗರತ್ನಮ್ಮ | ವ್ಯವಸ್ಥಾಪಕರು |
| ಅನಸೂಯ ಎನ್. | ಅಧೀಕ್ಷಕರು |
| ಪಾರ್ಥ ಎಂ.ಟಿ. | ಅಧೀಕ್ಷಕರು |
| ವಿನುತ ಎನ್. | ಪ್ರಥಮ ದರ್ಜೆ ಸಹಾಯಕರು |
| ಜಯರಾಮು (ನಿ) | ಪ್ರಥಮ ದರ್ಜೆ ಸಹಾಯಕರು |
| ಸುಬ್ಬರಾಜು ಎಂ. | ಪ್ರಥಮ ದರ್ಜೆ ಸಹಾಯಕರು |
| ಅರುಣ್ ಕುಮಾರ್ ಹೆಚ್.ಎಸ್. | ದ್ವಿತೀಯ ದರ್ಜೆ ಸಹಾಯಕರು |
| ಸುನೀತಾ | ಬೆರಳಚ್ಚುಗಾರರು |
| ಜವರ (ನಿವೃತ್ತಿ) | ಸಹಾಯಕರು |
| ಮಿಣಕ | ಸಹಾಯಕರು |
| ತಿರುಪಾಲ್ | ಸಹಾಯಕರು |
| ಮಹದೇವ ಕೆ. | ಸಹಾಯಕರು |
| ಗೌರಮ್ಮ | ಸಹಾಯಕರು |
| ಮಹದೇವಸ್ವಾಮಿ ಎಂ.ಜೆ. | ಸಹಾಯಕರು |
| ಗೋವಿಂದರಾಜು ಜೆ. | ಸಹಾಯಕರು |
| ಯದುರಾಜು ಬಿ.ಪಿ. (ನಿ) | ಸಹಾಯಕರು |
| ಸಚಿದೇವಿ | ಪರಿಚಾರಕರು |
| ಶಿವಲಿಂಗಯ್ಯ ಎಂ. | ಪರಿಚಾರಕರು |





ಮಹಿಳಾ ದಿನಾಚರಣೆಯ ಅಂಗವಾಗಿ ಸಾಧಕಿಯರ ಛಾಯಾಚಿತ್ರಗಳ ಪ್ರದರ್ಶನ

## ಮೂಲಭೂತ ಸೌಕರ್ಯಗಳು

1. ಸ್ನಾತಕ ಹಾಗೂ ಸ್ನಾತಕೋತ್ತರ ಕೇಂದ್ರಗಳಿಗೆ ಪ್ರತ್ಯೇಕವಾದ ಎರಡು ಸುಸಜ್ಜಿತ ಕಟ್ಟಡಗಳಿವೆ.
2. ಕುಡಿಯುವ ನೀರು ಮತ್ತು ಶೌಚಾಲಯಗಳ ಸೌಲಭ್ಯವಿದೆ.
3. ಎಲ್.ಸಿ.ಡಿ. ಪ್ರೊಜೆಕ್ಟರ್ ಅಳವಡಿಸಿರುವ ಸುಸಜ್ಜಿತ 'ಜಯಲಕ್ಷ್ಮಮ್ಮಣ್ಣಿ' ಸಭಾಂಗಣವಿದೆ.
4. ಕಾಲೇಜಿನ ಒಳಾವರಣದಲ್ಲಿ ಸಭಾ ವೇದಿಕೆಯಿದೆ.
5. ವಿರಾಮ ಸಮಯದಲ್ಲಿ ಓದಲು ಒಳಾವರಣದಲ್ಲಿ ಕಲ್ಲು ಬೆಂಚುಗಳಿವೆ ಹಾಗೂ ಕಾಲೇಜಿನ ಸುತ್ತ ನೆರಳು ನೀಡುವ ಹಸಿರು ಮರಗಳಿವೆ.
6. ವಿದ್ಯಾರ್ಥಿನಿಯರಿಗೆ ಕ್ಯಾಂಟೀನ್ ವ್ಯವಸ್ಥೆಯಿದೆ.
7. ಸಲಹಾ ಮತ್ತು ದೂರು ಪೆಟ್ಟಿಗೆಯನ್ನು ಪ್ರಾಚಾರ್ಯರ ಕಛೇರಿ ಬಳಿಯಲ್ಲಿ ಅಳವಡಿಸಲಾಗಿದೆ.
8. ಬಡ ವಿದ್ಯಾರ್ಥಿನಿಯರಿಗೆ ಆರ್ಥಿಕ ಸಹಾಯ ನೀಡಲು ಬಡ ವಿದ್ಯಾರ್ಥಿನಿಯರ ನಿಧಿ ಸ್ಥಾಪಿಸಲಾಗಿದೆ.
9. ಅಂತರ್ಜಾಲ ಸಂಪರ್ಕ ಹೊಂದಿದ ಗಣಕಯಂತ್ರ ವಿಭಾಗ ಹಾಗೂ ಗ್ರಂಥಾಲಯದಲ್ಲಿ ಗಣಕಯಂತ್ರ ಕೇಂದ್ರಗಳಿವೆ.
10. ಆಟದ ಮೈದಾನದ ಸೌಕರ್ಯವಿದೆ.
11. ಆರೋಗ್ಯ ತಪಾಸಣೆಯ ವ್ಯವಸ್ಥೆಯಿದೆ.
12. ವಿಶ್ರಾಂತಿ ಕೊಠಡಿ
13. ಸಿಸಿ ಕ್ಯಾಮೆರಾ ಅಳವಡಿಕೆ ಇದೆ

## ಕಾಲೇಜಿನ ಇತರೆ ನಿಯಮಾವಳಿಗಳು

1. ಹಾಜರಾತಿ ಕಡ್ಡಾಯ.
2. ತರಗತಿ, ಗ್ರಂಥಾಲಯ, ವಾಚನಾಲಯ, ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು.
3. ಆಸಕ್ತಿಯಿಂದ ಪಠ್ಯಪೂರಕ ವೇದಿಕೆಗಳಲ್ಲಿ ಪಾಲ್ಗೊಳ್ಳಬೇಕು.
4. ತಮ್ಮಲ್ಲಿರುವ ವಿಶೇಷ ಪ್ರತಿಭೆಗಳನ್ನು ಇಲ್ಲಿ ಬೆಳೆಸಿಕೊಳ್ಳಬೇಕು.
5. ಕಾರಿಡಾರ್‌ಗಳಲ್ಲಿ, ಕ್ಯಾಂಪಸ್‌ಗಳಲ್ಲಿ ಗೌರವಯುತವಾಗಿ ವರ್ತಿಸಬೇಕು.
6. ಕಾಲೇಜಿನ ಒಳ ಆವರಣದಲ್ಲಿ ನಿಶ್ಯಬ್ಧತೆಯನ್ನು ಕಾಪಾಡಬೇಕು.
7. ವಿದ್ಯಾರ್ಥಿನಿಯರು ಕಾಲೇಜನ್ನು ಪ್ರವೇಶಿಸುವ ಮುನ್ನ ಕಡ್ಡಾಯವಾಗಿ ಐ.ಡಿ. ಕಾರ್ಡನ್ನು ಧರಿಸಿರಬೇಕು.
8. ಕಾಲೇಜಿನ ಹೊರ ಮತ್ತು ಒಳ ಆವರಣವನ್ನು ಪ್ಲಾಸ್ಟಿಕ್ ಮುಕ್ತ ವಲಯ ಎಂದು ಘೋಷಿಸಿದೆ.
9. ಕಾಲೇಜಿನ ಒಳಾವರಣದಲ್ಲಿ ಮೊಬೈಲ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
10. ಕಾಲೇಜಿನ ಒಳಗೆ ಅನುಮತಿ ಇಲ್ಲದೆ ಅಪರಿಚಿತರು ಪ್ರವೇಶಿಸುವಂತಿಲ್ಲ.
11. ವಿದ್ಯಾರ್ಥಿನಿಯರು ಕಾಲೇಜಿನ ಹೊರ ಆವರಣದಲ್ಲಿ ಹುಡುಗರೊಂದಿಗೆ ಮಾತನಾಡುವಂತಿಲ್ಲ.
12. ವಿದ್ಯಾರ್ಥಿನಿಯರು ತಮ್ಮ ವಾಹನಗಳನ್ನು ನಿಗದಿತ ಸ್ಥಳದಲ್ಲಿಯೇ ನಿಲ್ಲಿಸಬೇಕು.
13. ವಿದ್ಯಾರ್ಥಿನಿಯರು ಕಾಲೇಜಿನ ನಿಯಮಗಳನ್ನು ಉಲ್ಲಂಘಿಸಿದರೆ ಅವರ ವಿರುದ್ಧ ಶಿಸ್ತುಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.
14. ಪ್ರತಿ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶ ಬಂದ ನಂತರ ಸಂಬಂಧಿಸಿದ ಅಂಕಪಟ್ಟಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

**ನಿಮ್ಮ ಏಳ್ಗೆಗೆ ನೀವೇ ಶಿಲ್ಪಿ**

## ಪ್ರವೇಶ ಸಮಯದಲ್ಲಿ ಅರ್ಜಿಯ ಜೊತೆ ಸಲ್ಲಿಸಬೇಕಾದ ದಾಖಲಾತಿಗಳು

1. ದ್ವಿತೀಯ ಪಿ.ಯು.ಸಿ. ಮೂಲ ಅಂಕಪಟ್ಟಿ
2. ಮೂಲ ವರ್ಗಾವಣೆ ಪತ್ರ
3. ಮೂಲ ನಡತೆ ಪ್ರಮಾಣ ಪತ್ರ
4. ಪ.ಜಾ/ಪ.ವ./ Cat-1 ವಿದ್ಯಾರ್ಥಿನಿಯರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರ. (ದೃಢೀಕೃತ ಜೆರಾಕ್ಸ್ ಪ್ರತಿ) (ಆದಾಯ ಮಿತಿ : ಪ.ಜಾ / ಪ.ವ. ರೂ. 2,50,000 ; ಪ್ರ.ವರ್ಗ 1 ರೂ. 1,00,000)
5. ಆದಾಯ ಪ್ರಮಾಣ ಪತ್ರ. (5 ವರ್ಷಗಳ ಅವಧಿ ಮೀರಿರದ, ವಾರ್ಷಿಕ ವರಮಾನ ರೂ. 44,500-00 ಮಿತಿಗೆ ಒಳಪಟ್ಟಿರುವ ಪ್ರಮಾಣ ಪತ್ರದ ದೃಢೀಕೃತ ಜೆರಾಕ್ಸ್ ಪ್ರತಿ).
6. ಪಾಸ್ ಪೋರ್ಟ್ ಪೋಟೋ - 5 ಮತ್ತು ಸ್ಟ್ಯಾಂಪ್ ಸೈಜ್ ಪೋಟೋ -1

ವಿ.ಸೂ. :
1. ಅರ್ಜಿಯನ್ನು ಸಲ್ಲಿಸುವ ಸಂದರ್ಭದಲ್ಲಿ ಮೇಲ್ಕಾಣಿಸಿದ ಪ್ರಮಾಣ ಪತ್ರಗಳ ದೃಢೀಕರಿಸಿದ ಜೆರಾಕ್ಸ್ ಪ್ರತಿಗಳನ್ನು ಲಗತ್ತಿಸಬೇಕು.
2. ಪ್ರವೇಶಕ್ಕೆ ಮೊದಲೇ ಎಲ್ಲಾ ಮೂಲದಾಖಲಾತಿಗಳ ಸಾಕಷ್ಟು ಜೆರಾಕ್ಸ್ ಪ್ರತಿಗಳನ್ನು ಮಾಡಿಸಿ ಇಟ್ಟುಕೊಳ್ಳುವುದು. ಪ್ರವೇಶಾನಂತರ ಯಾವುದೇ ಕಾರಣಕ್ಕೂ ಮೂಲದಾಖಲಾತಿಯನ್ನಾಗಲೀ ಅಥವಾ ಜೆರಾಕ್ಸ್ ಪ್ರತಿಯನ್ನಾಗಲೀ ವಿದ್ಯಾರ್ಥಿಗಳಿಗೆ ಹಿಂತಿರುಗಿಸುವುದಿಲ್ಲ.




ಕನಕದಾಸ ಜಯಂತಿ ಆಚರಣೆ



ಸ್ವಾತಂತ್ರ್ಯ ದಿನಾಚರಣೆಯಂದು ಅಭಿವ್ಯಕ್ತಿ ಉದ್ಘಾಟನೆ



ಕಾಲೇಜಿನ ಸ್ಕೌಟ್ಸ್ ಅಂಡ್ ಗೈಡ್ಸ್ ರೇಂಜರ್ಸ್ ಘಟಕ

## 2015-16ನೆಯ ಸಾಲಿನ ಶೈಕ್ಷಣಿಕ ವೇಳಾಪಟ್ಟಿ

| ಕ್ರ.ಸಂ. | ವಿವರಗಳು | ದಿನಾಂಕ |
|---|---|---|
| 1 | ಕಾಲೇಜು ಪ್ರಾರಂಭ | 29-06-2015 |
| 2 | 1, 3, 5ನೇ ಚತುರ್ಮಾಸದ ತರಗತಿಗಳ ಪ್ರಾರಂಭ | 01-07-2015 |
| 3 | ಮೊದಲ ಚತುರ್ಮಾಸದ ಪ್ರವೇಶ ಕೊನೆ ದಿನಾಂಕ | 15-07-2015 |
| 4 | ದಂಡ ಶುಲ್ಕದೊಂದಿಗೆ ಪ್ರವೇಶ ಕೊನೆ ದಿನಾಂಕ | 31-07-2015 |
| 5 | 1, 3, 5ನೇ ಚತುರ್ಮಾಸದ ಕೊನೆ ದಿನಾಂಕ | 31-10-2015 |
| 6 | ಮಧ್ಯಂತರ ರಜೆ | 01-11-2015 ರಿಂದ 31-12-2015 |
| 7 | ಪರೀಕ್ಷೆ ಪ್ರಾರಂಭ | 02-11-2015 |
| 8 | 2, 4, 6ನೇ ಚತುರ್ಮಾಸದ ತರಗತಿಗಳ ಪ್ರಾರಂಭ | 01-01-2016 |
| 9 | 2, 4, 6ನೇ ಚತುರ್ಮಾಸದ ಕೊನೆ ದಿನಾಂಕ | 30-04-2016 |
| 10 | ಬೇಸಿಗೆ ರಜೆ | 01-05-2016 ರಿಂದ 28-06-2016 |
| 11 | ಪರೀಕ್ಷಾ ಪ್ರಾರಂಭ | 02-05-2016 |
| 12 | 2016-17ರ ಶೈಕ್ಷಣಿಕ ವರ್ಷದ ಪ್ರಾರಂಭ | 29-06-2016 |

**ಸೂಚನೆಗಳು :**

1. ಒಂದು ನಿರ್ದಿಷ್ಟ ದಿನ ರಜೆ ಎಂದು ಘೋಷಿಸಲಾಗಿದ್ದರೆ, ಆಗ ಅನುಗುಣವಾದ ಕ್ರಿಯೆಯು ಮುಂದಿನ ಕೆಲಸದ ದಿನ ಜಾರಿಗೆ ಬರುತ್ತದೆ.
2. ಪರೀಕ್ಷೆಗಳು ವಿಶ್ವವಿದ್ಯಾನಿಲಯ ನಿಗದಿಪಡಿಸುವ ವೇಳಾಪಟ್ಟಿಗೆ ಅನುಗುಣವಾಗಿ ನಡೆಯುತ್ತದೆ.

## ಶುಲ್ಕಗಳ ವಿವರ : 2015-16

| ಪ.ಜಾತಿ ಪ.ಪಂ. ಪ್ರವರ್ಗ | ಆದಾಯ ಪ್ರಮಾಣಪತ್ರ ಸಲ್ಲಿಸುವವರು | ಇತರೆ ವಿದ್ಯಾರ್ಥಿನಿಯರು | ಪ.ಜಾತಿ ಪ.ಪಂ. ಪ.ವರ್ಗ | ಆದಾಯ ಪ್ರಮಾಣಪತ್ರ ಸಲ್ಲಿಸುವವರು | ಇತರೆ ವಿದ್ಯಾರ್ಥಿನಿಯರು | ಪ.ಜಾತಿ ಪ.ಪಂ. ಪ.ವರ್ಗ | ಆದಾಯ ಇತರೆ ಪ್ರಮಾಣಪತ್ರ ಸಲ್ಲಿಸುವವರು | ವಿದ್ಯಾರ್ಥಿನಿಯರು |
|---|---|---|---|---|---|---|---|---|
| ಪ್ರಥಮ ಬಿ.ಎ. | | | ದ್ವಿತೀಯ ಬಿ.ಎ. | | | ತೃತೀಯ ಬಿ.ಎ. | | |
| ₹ 2725/- | ₹ 2991/- | ₹ 2991/- | ₹ 1835/- | ₹ 2048/- | ₹ 2048/- | ₹ 1835/- | ₹ 2048/- | ₹ 2048/- |

**ಸೂಚನೆಗಳು :**

ಮೇಲ್ಕಂಡ ಶುಲ್ಕ ವಿವರ ತಾತ್ಕಾಲಿಕವಾಗಿದ್ದು ಮೈ.ವಿ.ವಿ. ಮತ್ತು ಸರ್ಕಾರದ ಆದೇಶದ ಅನ್ವಯ ಪರಿಷ್ಕೃತಗೊಳ್ಳುವ ಸಾಧ್ಯತೆ ಇರುತ್ತದೆ. ನಿಗದಿತ ಶುಲ್ಕ ವಿವರವನ್ನು ಪ್ರವೇಶಾತಿ ಸಂದರ್ಭದಲ್ಲಿ ಪ್ರಕಟಿಸಲಾಗುವುದು.

- ಪುನರ್ ಪ್ರವೇಶ, ವರ್ಗಾವಣೆ ಪ್ರವೇಶ ಶುಲ್ಕ — 1,505-00
- ವಿದೇಶಿ ವಿದ್ಯಾರ್ಥಿ ಪ್ರವೇಶ ಶುಲ್ಕ — 12,775-00
- ಹೊರರಾಜ್ಯ ವಿದ್ಯಾರ್ಥಿ ಪ್ರವೇಶ ಶುಲ್ಕ — 8,265-00
- ಸ್ವಯಂ ಭಾಷಾ ಅಧ್ಯಯನ ಶುಲ್ಕ — 1,130-00
- ಕಾಲೇಜು ಅಭಿವೃದ್ಧಿ ಶುಲ್ಕ (ಪ್ರತಿ ವಿದ್ಯಾರ್ಥಿಯೂ ಕಡ್ಡಾಯವಾಗಿ ಪಾವತಿಸಬೇಕು) — 500-00
- ಸಿಓಪಿ (Add-on-cource) — 910-00